**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ.</u>**

**<u>ಕ್ರಿ.ಮೊ.ಸಂಖ್ಯೆ:1138/2023</u>**

| | | |
|---|---|---|
| **ಪಿರ್ಯಾದಿ** | : | ಶ್ರೀ ಮಂಜು ಎಸ್.ಬಿ ಯಾನೆ<br>ಮಂಜುನಾಥ್ ಎಸ್.ಬಿ,<br>ತಂದೆಃ ಪೌತಿ ಬೋರಶೆಟ್ಟಿ,<br>ಪ್ರಾಯ 44 ವರ್ಷ<br>ವಾಸಃ ಕಾರ್ಪೋರೇಷನ್ ಬ್ಯಾಂಕ್ ಹಿಂಭಾ,<br>8ನೇ ಬ್ಲಾಕ್, ಗೋಣಿಕೊಪ್ಪ ಟೌನ್,<br>ಪೊನ್ನಂಪೇಟೆ ತಾಲ್ಲುಕು, ಕೊಡಗು - 571 213. |
| | | **ವಿರುದ್ಧ** |
| **ಆರೋಪಿ** | : | ಶ್ರೀಮತಿ ಮಮತ,<br>ಗಂಡಃ ಸೋಮೆಗೌಡ,<br>ಪ್ರಾಯಃ 40 ವರ್ಷ,<br>ವಾಸಃ 10ನೇ ಕ್ರಾಸ್, 3ನೇ ಬ್ಲಾಕ್,<br>ತ್ಯಾಗರಾಜನಗರ,<br>ಬೆಂಗಳೂರು - 560 041. |

**<u>ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ</u>**

**<u>ಪ್ರಶ್ನೆ ಸಂಖ್ಯೆ-1:</u>** ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉಃ ಔದು

**<u>ಪ್ರಶ್ನೆ ಸಂಖ್ಯೆ-2:</u>** ಪ್ರಾ.ಸಾಃ1 ಶ್ರೀ ಮಂಜುನಾಥ್ ಎಸ್.ಬಿ, ಪಿರ್ಯಾದುದಾರರು ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಮತ್ತು ನಿಮ್ಮ ಗಂಡ ಅವರಿಗೆ ಪರಿಚಯಸ್ಥರಾಗಿದ್ದು, ನೀವು ನಿಮ್ಮ ಆರ್ಥಿಕ ಅಗತ್ಯತೆಗಾಗಿ 2022 ನೇ ಇಸವಿಯ ಮೇ ತಿಂಗಳಿನಲ್ಲಿ ನಿಮ್ಮ ಗಂಡನ ಜೊತೆಗೂಡಿ ಪಿರ್ಯಾದುದಾರರಿಂದ ರೂ.50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿಯವರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ದಿಃ01.05.2023 ರ ಕರ್ನಾಟಕ ಬ್ಯಾಂಕ್ ಲಿ., ಬನಶಂಕರಿ 2ನೇ ಸ್ಟೇಜ್ ಶಾಖೆಯ ನಿಮ್ಮ ಖಾತೆಯ 666476 ನಂಬರಿನ ಚೆಕ್ ಅನ್ನು ಸಾಲದ ಭಾದ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಕೆನರ ಬ್ಯಾಂಕ್, ಪೊನ್ನಂಪೇಟೆ ಶಾಖೆಗೆ ಹಾಜರುಪಡಿಸಿದ್ದು, ಅವರು ದಿಃ20.07.2023 ರಂದು (Payment stopped by the drawer) ಎಂದು ಹಿಂಬರಹವನ್ನು ನೀಡಿರುತ್ತಾರೆ. ನಂತರ ಪಿರ್ಯಾದಿಯವರು ತಮ್ಮ ವಕೀಲರ ಮೂಲಕ ದಿಃ27.07.2023 ರಂದು 15 ದಿನಗಳೊಳಗೆ ಚೆಕ್ ನ ಹಣವನ್ನು ಹಿಂತಿರುಗಿಸುವಂತೆ ಕಾನೂನು ರೀತಿಯಲ್ಲಿ ನೋಟೀಸನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಚೆಕ್‌ನ ಹಣವನ್ನು ಹಿಂಡಿರುಗಿಸದೇ ಇರುವ ಕಾರಣ ಅವರು ನಿಮ್ಮ ವಿರುದ್ಧ ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ

ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು, ನಿ.ಪಿ.2 ಬ್ಯಾಂಕ್ ಹಿಂಬರಹವನ್ನು, ನಿ.ಪಿ.3 ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.4 ಅಂಚೆ ರಶೀತಿಯನ್ನು, ನಿ.ಪಿ.5 ಅಂಚೆ ಲಕೋಟೆಯನ್ನು, ನಿ.ಪಿ.6 ಜಾರಿಯಾಗದ ನೋಟೀಸನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

**ಪ್ರಶ್ನೆ ಸಂಖ್ಯೆ-3:** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ-4** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ29.01.2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸ್ಥಳಃ ಪೊನ್ನಂಪೇಟೆ,
ದಿನಾಂಕಃ 29.01.2026

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಪೊನ್ನಂಪೇಟೆ.

On perusal of records, the accused alleged to have committed offences P/U/Sec.138 of N.I Act. The above alleged offence against accused is bailable in nature and the same is triable by this court. Insufficient Funds and Dormant Account